International Journal of Kannada Research 2020; 6(1): 18-23

International Journal of Kannada Research
www.kannadajournal.com

**ISSN: 2454–5813**
IJKR 2020; 6(1): 18-23
© 2020 IJKR
www.kannadajournal.com
Received: 10-11-2019
Accepted: 12-12-2019

**ಸಂತೋಷ ಕುಮಾರ ರಾಮರೆಡ್ಡಿ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ. ಕರ್ನಾಟಕ, ಭಾರತ

**ಡಾ.ಜಗನ್ನಾಥ ಹೆಬ್ಬಾಳ**
ಎಂ.ಎ.ಪಿಎಚ್.ಡಿ.ಡಿ.ಲಿಟ್
ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ
ಅಧ್ಯಯನ ಕೇಂದ್ರ ಕರ್ನಾಟಕ ಕಾಲೇಜು
ಬೀದರ, ಕರ್ನಾಟಕ, ಭಾರತ

**Corresponding Author:**
**ಸಂತೋಷ ಕುಮಾರ ರಾಮರೆಡ್ಡಿ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ. ಕರ್ನಾಟಕ, ಭಾರತ

# [illegible]

**ಸಂತೋಷ ಕುಮಾರ ರಾಮರೆಡ್ಡಿ, ಡಾ.ಜಗನ್ನಾಥ ಹೆಬ್ಬಾಳ**

**ಪ್ರಸ್ಥಾವನೆ**

ಭಾರತ ದೇಶವು ಹಳ್ಳಿಗಳಿಂದ ಕೂಡಿದ ಸಮೃದ್ಧ ಪರಿಸರ ಹೊಂದಿರುವ ರಾಷ್ಟ್ರ. ಈ ರಾಷ್ಟ್ರದ ಇತಿಹಾಸವನ್ನು ಅವಲೋಕಿಸಿದರೆ ಹತ್ತು ಹಲವು ರಾಜ ಸಂಸ್ಥಾನದ ಆಳ್ವಿಕೆಯನ್ನು ಕಾಣಬಹುದು. ಇವರ ಆಳ್ವಿಕೆಯು ವಿವಿಧ ಪ್ರಾಂತಗಳಾಗಿ ವಿಭಜಗೊಂಡು ರಾಜ್ಯ ಭಾರದ ಚಟುವಟಿಕೆಗಳು ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ಜನಜೀವನ ಬದುಕನಲ್ಲಿ ಅದು ಪ್ರಾಚೀನ ಕಾಲದಿಂದಲೂ ಹಲವು ಕಲೆಗಳ ತವರೂರಾಗಿ ಬೆಳೆದು ಭಾರತದ ಸಾಂಸ್ಕೃತಿಕ ಕ್ಷೇತ್ರಕ್ಕೆ ತನ್ನದೆಯಾದ ಕೊಡುಗೆ ನೀಡುತ್ತಾ ಬಂದಿದೆ.

ಶಿಲಾಯುಗದ ಬದುಕಿನಿಂದ ಹಿಡಿದು ಪ್ರಸ್ತುತ ಬದುಕಿನ ವರೆಗೆ ಗಮನಿಸಿದರೆ ಜನ–ಜೀವನದಲ್ಲಿ ಬದಲಾಣೆಯನ್ನು ಗಮನಿಸಬಹುದು. ಇದರ ಜೊತೆಗೆ ಹಲವು ಕಲೆಗಳನ್ನು ತನ್ನ ಜೊತೆಗೆ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ, ಇದಕ್ಕೆ ಕನ್ನಡ ನಾಡು ಹೊರತಲ್ಲ. ಇಲ್ಲಿನ ನಾಡು–ನುಡಿಗೆ ಜನಪದ ಪ್ರದರ್ಶನ ಕಲೆಗಳು ಸಾಂಸ್ಕೃತಿಕವಾಗಿ ಬೆರೆತು ಹೊಗಿದೆ. ಇಂತಹ ಸಾಂಸ್ಕೃತಿಕ ಕ್ಷೇತ್ರಕ್ಕೆ ಯಾದಗಿರಿ ಜಿಲ್ಲೆಯಲ್ಲಿ ನಡೆಯುವ ಜಾತ್ರೆಗಳಲ್ಲಿ ಜನಪದ ಪ್ರದರ್ಶನ ಕಲೆಗಳು ತುಂಬ ಮಹತ್ವ ಎಂದೆನಿಸುತ್ತದೆ.

ಯಾದಗಿರಿ ಜಿಲ್ಲೆಯು ಆಖಂಡ ಕರ್ನಾಟಕದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ, ಈ ಜಿಲ್ಲೆಯು ಹಿಂದೂಳಿದ ಜಿಲ್ಲೆ ಎಂದು ಹಣೆಪಟ್ಟಿ ಹೊಂದಿದ್ದರು, ಗ್ರಾಮೀಣ ಬದುಕಿನ ಜೀವಾಳವಾದ ಜನಪದ ಪ್ರದರ್ಶನ ಕಲೆಗಳಲ್ಲಿ ಜಿಲ್ಲೆಯು ಹಿಂದೂಳಿದಿಲ್ಲ. ಜನಪದರ ಜೀವನದೊಂದಿಗೆ ಜಾತ್ರೆಗಳು ಬೆರೆತುಕೊಂಡಿವೆ. ಎಷ್ಟೋ ಜನ ಬಡ–ಬಗ್ಗರ, ದೀನ–ದಲೀತರು ಬದುಕಲು ಅಕ್ಷಯ ಪಾತ್ರೆಯಂತೆ ನಮ್ಮೂರಿನ ಜಾತ್ರೆಗಳು ನಡೆಯುತ್ತವೆ. (ನಮ್ಮೂರಿನ ಜಾತ್ರೆಗಳು ಅಂದರೆ ಅದು ಯಾವ ಊರಾದರು ಹಾಗಿರಬಹುದು.) ಜಾತ್ರೆಯು ಕೇವಲ ಒಂದು ವಲಯ ವರ್ಗಕ್ಕೆ ಸೀಮಿತವಾಗಿರದೆ,

ಧಾರ್ಮಿಕತೆಯನ್ನಾಗಲಿ, ಆದ್ಯಾತ್ಮಿಕತೆಯನ್ನಾಗಲಿ, ಆರ್ಥಿಕವೆಯಾಗಿರಲಿ ಅಥವಾ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸೀಮಿತವಾಗಿರದೆ, ಹಲವು ಕಲೆಗಳ ತವರೂರು, ಕಲೆಗಳನ್ನು ಪ್ರದರ್ಶಿಸುವ ಬಯಲು ರಂಗಮಂದಿರ, ಜನಪದರ ಪ್ರತಿಭೆಯ ಅನಾವರಣದ ಭವ್ಯ ವೇದಿಕೆಯೇ ಜಾತ್ರೆಗಳು ಎಂತಲು ಕರೆಯುತ್ತಾರೆ. ಇಂತಹ ಕಲೆಗಳಿಂದ ನೂರಾರು ಮೈಲಿಗಟ್ಟಲೆ ದೂರದಿಂದ ಆಗಮಿಸುವ ಭಕ್ತರಿಗೆ ಮನರಂಜನೆಯ ತಾಣವಾಗಿರುತ್ತದೆ. ಜಾತಿ, ಮತ, ಪಂತಗಳ ತಾರತಮ್ಯವಿಲ್ಲದೆ, ಯಾವುದೇ ಕಟ್ಟುಪಾಡುಗಳಿಲ್ಲದೆ, ಎಲ್ಲಾ ವರ್ಗದ ಸಮುದಾಯವು ಸಾಂಪ್ರದಾಯಿಕವಾಗಿ ಒಂದೇಡೆ ಸೇರಿಕೊಂಡು ಅವರವರ ಕಲೆಗಳನ್ನು ಪ್ರದರ್ಶಿಸುವದು ಜಾತ್ರೆಗಳಲ್ಲಿ ಕಾಣಬಹುದು.

ಇವುಗಳು ಪ್ರದರ್ಶನಕ್ಕೆ ತಿಂಗಳು ಗಟ್ಟಲೆ ತಯಾರಿಯಲ್ಲಿರುತ್ತಾರೆ. ಊರಿಂದ ಊರಿಗೆ ಮೈಲುಗಳ ದೂರದವರೆಗೆ ಜಾತ್ರೆ ನಡೆಯುವ ದಿನ ಮತ್ತು ಜಾತ್ರೆಗಳಲ್ಲಿ ಪ್ರದರ್ಶನಗೊಳ್ಳುವ ಹಲವು ಕಲೆಗಳ ಮಾಹಿತಿ ಹಾಗೂ ಕಲೆಗಳಲ್ಲಿ ಜಯಶಾಲಿಯಾದ ವಿಜೆತನಿಗೆ ಬಹುಮಾನ ನೀಡುವದು ನಡೆಯುತ್ತವೆ. ಇವೆಲ್ಲವು ಜಾತ್ರೋತ್ಸವ ನಡೆಯುವ ಕೆಲವು ಮುನ್ನಾದಿನಗಳಲ್ಲಿಯೆ ಸಂಪೂರ್ಣ ಯೋಜನೆಯೊಂದಿಗೆ ಪ್ರಾರಂಭವಾಗುವುವು. ಅಥವಾ ಸಿದ್ದತೆಯನ್ನು ಮಾಡಿಕೋಳ್ಳುವರು. ವ್ಯವಸ್ಥಿವಾದ ರೂಪರೇಶಗಳೊಂದಿಗೆ ಜಾತ್ರೆಗಳಲ್ಲಿ ಭಾಗವಹಿಸುವ ವಿವಿಧ ತಂಡಗಳ ವಿವರ ಮತ್ತು ನಿರ್ದಿಷ್ಟಪಡಿಸಿದ ಸಮಯ ಮತ್ತು ನಿಗದಿ ಪಡಿಸಿದ ದಿನದಂದು ಕಲೆಗಳ ಪ್ರದರ್ಶನಗೋಳ್ಳುತ್ತವೆ.

ಒಟ್ಟಿನಲ್ಲಿ ಜನಪದ ಕಲೆಗಳು ಪ್ರದರ್ಶನ ವಿರದಿದ್ದರೆ ಅದು ಜಾತ್ರೆ ಎನಿಸದು, ಜನಪದ ಕಲೆಗಳು ಇದ್ದರೆ ಮಾತ್ರ ಜಾತ್ರೆಯು ಪೂರ್ಣರೂಪ ಪಡೆದುಕೋಳ್ಳುವುದು.

ಇಂತಹ ಜಾತ್ರೆಗಳು ಯಾದಗಿರಿ ಜಿಲ್ಲೆಯಾದ್ಯಂತ ಪ್ರಮುಖ ಜಾತ್ರೆಗಳಲ್ಲಿ ನಡೆಯುತ್ತವೆ.

ಉದಾಹರಣೆಗೆ ಮೈಲಾಪುರದ ಶ್ರೀ ಮೈಲಾರಲಿಂಗೇಶ್ವರನ ಜಾತೆಯಲ್ಲಿ ಡೊಳ್ಳು ಕುಣಿತ ಕಲೆ ಪ್ರಮುಖ ಜನಪದ ಪ್ರದರ್ಶನ ಕಲಯಾಗಿದೆ. ಕಾಳಬೆಳಗುಂದಿಯ ಶ್ರೀ ಬನದೇಶ್ವರನ ಜಾತ್ರೆ, ಗಾಜರಕೋಟ್‌ನ ಶ್ರೀ ರಚಪ್ಪಯ್ಯ ಮತ್ತು ಕಡ್ಲಪ್ಪಯ್ಯನ ಜಾತ್ರೆ, ಯಾದಗಿರಿ ನಗರದ ಶ್ರೀ ಮಹಾಲಕ್ಷ್ಮೀ ಜಾತ್ರೆ, ಗುರುಸುಣಗಿಯ ಶ್ರೀ ಸಿದ್ದಲಿಂಗೇಶ್ವರರ ಜಾತ್ರೆ, ಜಲಾಲ್ಸಾಬ್ ಉರುಸ್–ಗುರುಸುಣಗಿ, ಶಹಾಪೂರದ ಶ್ರೀ ಚರಬಸವೇಶ್ವರರ ಜಾತ್ರೆ, ಭೀಮರಾಯನ ಗುಡಿಯ ಬಲಭೀಮದೇವರ ಜಾತ್ರೆ, ಸುರಪೂರದ ಶ್ರೀ ವೇಣುಗೋಪಾಲ ಸ್ವಾಮಿಯ ಜಾತ್ರೆ, ತಿಂಥಣಿಯ ಶ್ರೀ ಮೌನೇಶ್ವರರ ಜಾತ್ರೆಯಲ್ಲಿ ಪುರವಂತಿಗೆಯ ಕಲೆ ಕಾಣಬಹುದು. ಹುಣಸಿಗಿಯ ಶ್ರೀ ನೀಲಕಂಠೇಶ್ವರರ ಜಾತ್ರೆ, ಮುಂತಾದ ಜಾತ್ರೆಗಳಲ್ಲಿ ಜನಪದ ಕಲೆಗಳು ಕಂಡುಬರುತ್ತವೆ.

"ಜಾತ್ರೆಗಳು ನೋಟಕ್ಕೆ ಚಂದ; ಹಬ್ಬಗಳು ಊಟಕ್ಕೆ ಚಂದ" ಎಂಬಂತೆ, ಜಾತ್ರೆಗಳು ನೋಡುವುದಕ್ಕೂ ಹಾಗೂ ಮನರಂಜನೆಯನ್ನು ಪಡೆಯುವದಕ್ಕು ಹಲವು ಕಲೆಗಳ ತಾಣಗಳೇ ಜಾತ್ರೆಗಳು. ಅಂತಹ ಕಲೆಗಳಾದ ಕೋಲಾಟ, ಸಣ್ಣಾಟ, ದೊಡ್ಡಾಟ, ಬಯಲಾಟ, ಕುಸ್ತಿ ಪಂದ್ಯಾವಳಿ, ವೇಷಗಾರರು, ತೊಗಲುಗೊಂಬೆಯಾಟ, ಯಕ್ಷಗಾನ ಹಾಗೂ ಜನಪದರ ಹಾಡುಗಾರಿಗೆ, ಗೀಗೀ ಮೇಳ, ಭಜನಾಮೇಳಾ, ಲಂಬಾಣಿ ನೃತ್ಯ, ಪುರುವಂತರು, ಹಾವಾಡಿಗರು, ಅಲಾವಿ ಕುಣಿತ, ಪೋತರಾಜ, ಚೌಡಮ್ಮನ ಕುಣಿತ, ನಂದಿಕೋಲು ಕುಣಿತ, ಹನುಮನ ವೇಷ, ಹುಲಿ ವೇಷ ಇನ್ನು ಮುಂತಾದವುಗಳು ನಮ್ಮ ಸಾಂಸ್ಕೃತಿಕ ರಂಗಕ್ಕೆ ಕೊಡುಗೆ ನೀಡಿದೆ.

**ಕೋಲಾಟ**

ಕೋಲಾಟವು ಜಾತ್ರೆಗಳಲ್ಲಿ ಹಾಗೂ ಮೊಹರಂ ಹಬ್ಬಗಳಲ್ಲಿ ಹಾಡುವುದು ಯಾದಗಿರಿ ಜಿಲ್ಲೆಯ ಜಾತ್ರೆಗಳಲ್ಲಿ ಕಾಣುತ್ತೇವೆ. ಜನಪದರು ಹುಟ್ಟು ಹಾಕಿರುವ ಆಟಗಳಲ್ಲಿ ಮನೊರಂಜನೆ ಭರಿತ ಆಟವಿದು. ಜಾತ್ರೆಗಳಲ್ಲಿ ಜನಸಮೂಹದ ಮದ್ಯದಲ್ಲಿ ಗುಂಪು–ಗುಂಪಾಗಿ ಸೇರಿಕೊಂಡು ಕೋಲುಗಳನ್ನು ಹಿಡಿದು ಹಾಡಿನ ಲಯಕ್ಕೆ ತಕ್ಕಂತೆ ಕುಣಿದಾಟುವ ಕೋಲಾಟದ ದೃಶ್ಯ ಮನಮೋಹಕ. ಇತ್ತಚಿನ ದಿನಗಳಲ್ಲಿ ಕೋಲಾಟವುದು ಗಣೇಶ ಚತುರ್ಥಿಯ ಹಬ್ಬಗಳಲ್ಲಿ ಕೋಲಾಡುವದು, ಶಾಲಾ ವಾರ್ಷಿಕೋತ್ಸವದಲ್ಲಿ ಕೋಲಾಡುವದು ಸರ್ವೆಸಾಮಾನ್ಯ ಈ ಆಟವು ಒಂದು ಗಂಡು ಕಲೆಯಾಗಿದೆ. ಹೆಣ್ಣು ಮಕ್ಕಳು ಕೋಲಾಡುವುದು ವಿರಳ, ಆದರೆ ಆಧುನಿಕ ಯುಗದಲ್ಲಿ ಹೆಣ್ಣು ಮಕ್ಕಳು ಕೋಲಾಡುವುದು ಸಾಹಿತ್ಯ ಜಾತ್ರೆಗಳಲ್ಲಿ, ನಾಡಿನ ಸಾಂಸ್ಕೃತಿಕ ಬಿಂಬಿಸುವ ಕಾರ್ಯಕ್ರಮಗಳಲ್ಲಿ ಮಹಿಳೆಯ ಪ್ರತಿಭೆ ಅರಿಯಬಹುದಾಗಿದೆ. ಈ ಕೋಲಾಟವು ವೇಷಭೂಷಣಗಳೊಂದಿಗೆ ವಿವಿಧ ವಾದ್ಯಗಳನ್ನು ಹೊಂದಿರುತ್ತದೆ. ಬಣ್ಣ–ಬಣ್ಣದ ವಸ್ತ್ರಗಳೊಂದಿಗೆ ಅವರವರ ಗುಂಪುಗಳು ರಚೆನೆಯಾಗಿರುತ್ತವೆ.

ಕಟ್ಟಿದ ಕಚ್ಚೆ, ತಲೆಗೆ ಟೋಪಿ, ಕಾಲಿಗೆ ಗೆಜ್ಜೆ, ಸೊಂಟಕ್ಕೆ ಬಣ್ಣದ ವಸ್ತ್ರ ಹೊಂದಿದ್ದು ಕೋಲಡಿದರೆ ಇಡಿ ಜಾತ್ರೆಯ ಜನವನ್ನು ಮೂಖ ವಿಸ್ಮಿತರನ್ನಾಗಿ ಮಾಡಿಬಿಡುತ್ತದೆ. ಕೋಲಾಟವು ಒಬ್ಬನ ಕೋಲಿಗೆ ಮತ್ತೊಬ್ಬನ ಕೋಲನ್ನು ತಾಕಿಸುವ ಮೂಲಕ ಆಟವು ಆರಂಭವಾಗುವುದು ಅದಕ್ಕೆ ತಕ್ಕಂತೆ ಲಯಬದ್ಧವಾದ ಹಾಡುಗಾರಿಕೆಯು ಇರುತ್ತದೆ.

ಹೀಗೆ ಒಬ್ಬನಿಂದ ಮತ್ತೊಬ್ಬನಿಗೆ, ಮಗದೊಬ್ಬನಿಗೆ ಕೋಲನ್ನು ತಾಕಿಸುತ್ತಾ ಸುತ್ತು ಹೊಡಿಯುತ್ತಾ ಗುಂಪನ್ನು ಚದುರಿಸುತ್ತಾ ಹೊರಗಿನವರು ಒಳಗೂ, ಒಳಗಿನವರು ಹೊರಗೂಕೋಲನ್ನು ಕೋಲಟದ ವಿಧನವಾಗಿದೆ.

" ಕೋಲು ಕೋಲೆ ಕೋಲನ್ನು ಕೋಲೆ" ಎಂಬ ಹಾಡಿನೊಂದಿಗೆ ಹಾಡುವ ವಿವಿಧ ಕೋಲಾಟದ ಹಾಡುಗಳು ಧಾರ್ಮಿಕ, ಸಾಮಾಜಿಕ, ಪೌರಾಣಿಕಹತ್ತು ಹಲವು ವ್ಯಕ್ತಿಗಳ ಕುರಿತಾಗಿ ರಚಿತವಾದ ಕೋಲಾಟದ ಹಾಡುಗಳನ್ನು ಹಾಡುತ್ತಾರೆ. ಜನರನ್ನು ನಕ್ಕು ನಗಿಸುವ ಹಾಡನ್ನು ಹಾಡುತ್ತಾರೆ. ಈ ಕಲೆಯು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಕಂಡುಬರುತ್ತದೆ. ಸುಮಾರು 10 ಜನಕ್ಕಿಂತ ಹೆಚ್ಚು ಜನರ ವಿವಿಧ ತಂಡಗಳೊಂದಿಗೆ ಕೊಲಾಟವಾಡುವುದು ವಾಡಿಕೆ, ವಿಶೇಷವಾಗಿ ಜಾತ್ರೆಗಳು ನಡೆಯುವ ಮುನ್ನಾದಿನಗಳಲ್ಲಿ ಅಭ್ಯಾಸ ಮಾಡಿಕೊಂಡು ಜಾತ್ರೆಯ ದಿವಸದಂದು ಅದ್ದೂರಿಯಾಗಿ ಸಂಭ್ರಮದಿಂದ ಕೋಲಟವಾಡುತ್ತಾರೆ. ಇಂತಹ ಕಲೆ ನಮ್ಮ ನಾಡಿನ ಕೀರ್ತಿ, ಪರಂಪರೆಯ ಪ್ರತೀಕವಾಗಿ, ನಾಡಿನ ಭವ್ಯ ಸಂಸ್ಕೃತಿಯನ್ನು ಬಿಂಬಿಸುವ ಕಲೆಯಾಗಿದೆ.



ಗಣೇಶನ ಉತ್ಸವದಲ್ಲಿ ಕೋಲಾಡುತ್ತಿರುವ ದೃಶ್ಯ

**ಬಯಲಾಟ**

ಗ್ರಾಮೀಣ ಬದುಕಿನಲ್ಲಿ ಬಯಲಾಟುವು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ವಿವಿಧ ಗ್ರಾಮಗಳಿಂದ ಕೂಡಿದ ಯಾದಗಿರಿ ಜಿಲ್ಲೆಯು ಕಲೆಗಳ ತಾಣವಾಗಿದೆ. ಸಂಕೀರ್ಣ ಕಲೆಯಾದ ಈ ಬಯಲಾಟವು ಉತ್ತರ ಕರ್ನಾಟಕದ ಪ್ರಸಿದ್ಧ ಜಾನಪದ ಕಲಾಮೇಳ ವೆಂಬುದಂತೂ ಸತ್ಯ. ಜನಪದ ಕುಣಿತಕ್ಕೆ ಒಂದು ವಿಶಿಷ್ಟ ನೆಲೆಯನ್ನು ಕಟ್ಟಿಕೊಟ್ಟದ್ದು ಈ ಬಯಲಾಟದ ಕಲೆ. ಬಯಲಾಟವು ಮೂಲದಲ್ಲಿ ಧರ್ಮದ ಮೂಲವನ್ನು ಒಳಗೊಂಡು ನಡೆಯುತ್ತಿದ್ದವು, ತದನಂತರದಲ್ಲಿ ಅವು ಅನುಕರಣ ಮೂಲವಾಗಿ ಬೆಳೆದವು ಮನುಷ್ಯ ಪಶು–ಪಕ್ಷಿಯಂತೆ ದ್ವನಿಯನ್ನು ಮಾಡುವುದು, ತಂದೆ–ತಾಯಿಯ ವರ್ತನೆಯನ್ನು ನೋಡಿ ಅವರಂತೆ ವರ್ತಿಸುವುದು ಅನುಕರಣೆಯ ಮೂಲವಾಗಿದೆ.

ಆದರೂ ಬಯಲಾಟವು ಧಾರ್ಮಿಕ ಪರಿಸರದಲ್ಲಿ ಬೆಳೆದು ಬಂದಿರುವುದು ಅಲ್ಲಗಳೆಯುವಂತಿಲ್ಲ.

ಬಯಲಾಟವು ಪ್ರಾರಂಭದಲ್ಲಿ ಬರಿ "ಆಟ" ವೆಂದು ಕರೆಯುತ್ತಿದ್ದರು, ದೇವಾಲಯದ ಚೌಕಟ್ಟಿನಲ್ಲಿ ನಡೆಯುವ ಆಟವಾಗಿತ್ತು. ನಂತರದ ದಿನಗಳಲ್ಲಿ ಅದು ದೇವಾಲಯವನ್ನು ಬಿಟ್ಟು ಹೊರಬಂದು ಬಯಲಲ್ಲಿ ಆಡುವದು ರೂಢಿಯಾಯಿತು, ಬಯಲಲ್ಲಿ ಆಡುವ ಆಟವೇ ಬಯಲಾಟವಾಯಿತು. ಆದರೂ ಇಂದಿಗೂ ಬಯಲಾಟವೆಂದು ಕರೆಯುವ ರೂಡಿಗಿಂತ ಆಟವೆಂದೇ ಕರೆಯುವುದು ಅತಿ ಹೆಚ್ಚು ರೂಢಿಯಲ್ಲಿದೆ.

ಈ ಕಲೆಯು ವಂಶಪಾರಂಪರೆಯಾಗಿ ಆಯಾ ಮನೆತನಕ್ಕೆ ಸಂಬಂದಿಸಿದಂತೆ ಬೆಳೆದು ಬಂದಿರುವ ಪುರಾತನ ಕಲೆಯಾಗಿದೆ. ಬಯಲಾಟದ ಕಲಾವಿದರು ಹೆಚ್ಚಾನು ಹೆಚ್ಚು ಅವಿದ್ಯಾವಂತರು,

ಬಯಲಾಟದಲ್ಲಿ ಒಂದು ಸಣ್ಣಾಟ ಇನ್ನೊಂದು ದೊಡ್ಡಾಟ ಎಂಬ ಎರಡು ಪ್ರಕಾರಗಳು ಕಂಡುಬರುತ್ತವೆ. ಸಣ್ಣಾಟವು ಕಡಿಮೆ ಸಮಯದಲ್ಲಿ ಮುಗಿಯುವ ಆಟವಾಗಿರುತ್ತದೆ. ದೊಡ್ಡಾಟವು ರಾತ್ರಿ ಆರಂಭಗೊಂಡು ಸೂರ್ಯೋದಯದ ವರೆಗೆ ನಡೆಯುತ್ತವೆ.

ಇಂತಹ ಆಟಗಳಲ್ಲಿ ಪೌರಾಣಿಕ ಕತೆಗಳು, ಕುರುಕ್ಷೇತ್ರ, ರಕ್ತರಾತ್ರಿ, ದ್ರೌಪದಿಯ ವಸ್ತ್ರಾಪಹರಣ, ವೀರ ಅಭಿಮನ್ಯು ಕಾಳಕ ಮುಂತಾದ ಕತೆಗಳನ್ನು ಆಧರಿಸಿ ಬಯಲಾಟಗಳು ನಡೆಯುತ್ತವೆ. ಇವೆಲ್ಲವು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ವಿನೋಧಾತ್ಮಕ ವಿಷಯಗಳನ್ನು ಒಳಗೊಂಡ ಬಯಲಾಟಗಳು ನಡೆಯುತ್ತವೆ.

ಬಯಲಾಟವು ಬೆಸಿಗೆಯ ದಿನಗಳಲ್ಲಿ ಆಡುವದು ವಾಡಿಕೆ, ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ರೈತರು ತಮ್ಮ ಸುಗ್ಗಿಯ ಕಾಲವನ್ನು ಮುಗಿಸಿಕೊಂಡು ಇಂತಹ ಆಟಗಳಲ್ಲಿ ಉತ್ಸಾಹ ತೋರುತ್ತಾರೆ. ಇನ್ನು ಕೆಲವು ಬಯಲಾಟಗಳು ವಿಶೇಷ ದಿನಗಳಲ್ಲಿ ಅಂದರೆ ತಮ್ಮ ಊರಿನ ಜಾತ್ರೆಗಳ ದಿನದಂದು ಬಯಲಾಟ ಆಡುವುದು ವಿಶೇಷ. ರಥೋತ್ಸವ ಇದ್ದರೆ ರಥೋತ್ಸವದ ನಂತರ ಬಯಲಾಟಕ್ಕೆ ಚಾಲನೆ ನೀಡುತ್ತಾರೆ.

ಜಾತ್ರೆಗಳಲ್ಲಿ ಅತಿ ಹೆಚ್ಚು ಪೌರಾಣಿಕ ಬಯಲಾಟಗಳು ಆಡುವದು ಕಾಣುತ್ತೇವೆ. ಯಾವ ದೇವರ ಜಾತ್ರೆ ನಡೆಯುತ್ತದೆಯೊ ಆ ದೇವರ ಕುರಿತು ಬಯಲಾಟ ಆಡುವುದು ವಾಡಿಕೆ ಇದೆ. ಉದಾಹರಣೆಗೆ ಸುರಪೂರದ ಸುಕ್ಷೇತ್ರವಾದ ತಿಂಥಣಿಯ ಶ್ರೀ ಮೌನೇಶ್ವರರ ಜಾತ್ರೆಯಂದು ಅವರ ಜೀವನ ಚರಿತೆಗೆ ಸಂಭಂದಿಸಿದಂತೆ ಶ್ರೀ ಮೌನೇಶ್ವರರ ಕತೆಯನ್ನು ಬಯಲಾಟದಲ್ಲಿ ಆಡುವದು ಕಾಣುತ್ತೇವೆ. ಬಯಲಾಟವು ಆಡಲು ನಿಗದಿ ಪಡಿಸಿದ ದಿನದಂದು ಸುಮಾರು ಆರು ತಿಂಗಳು ಅಥವಾ ಮೂರು ತಿಂಗಳು ಮುಂಚಿತವಾಗಿ ಪೂರ್ವತಯಾರಿಯನ್ನು ಮಾಡಿಕೊಳ್ಳುತ್ತಾರೆ. ಊರಿನಲ್ಲಿ ಜಾತ್ರೆಯು ಆರಂಭವಾದ ನಂತರ ವಿಶಾಲಾದ ಮೈದಾನದಲ್ಲಿ ವೇದಿಕೆಯನ್ನು ನಿರ್ಮಿಸಿ ಬಯಲಾಟವನ್ನು ಆಡುತ್ತಾರೆ.

ಹಳ್ಳಿಗಳಲ್ಲಿ ಕಲಾವಿದರು ಕತೆಗೆ ತಕ್ಕಂತೆ ತಾವೆ ಪಾತ್ರವನ್ನು ನಿರ್ವಹಿಸುತ್ತಾರೆ, ಸ್ತ್ರೀ ಪಾತ್ರವನ್ನು ಬೆರೆ ಊರಿನಿಂದ ಕರೆಸುತ್ತಾರೆ, ಇಲ್ಲವೆ ಪುರುಷರೇ ಸ್ತ್ರೀ ಪಾತ್ರವನ್ನು ಹಾಕುವುದು ವಿಶೇಷ. ವಾದ್ಯ ಪರಿಕರಗಳೊಂದಿಗೆ ನಡೆಯುತ್ತವೆ. ಉದಾಹರಣೆಗೆ 'ಡಪ್ಪಿನಾಟ' 'ಮದ್ದಳೆಯಾಟ' 'ಶರಣರಾಟ' 'ದಾಸರಾಟ' ಮುಂತಾದವುಗಳು, ಶ್ರೀ ಕೃಷ್ಣಪಾರಿಜಾತವು ಒಂದು ವಿಶಿಷ್ಟ ಆಟವಾಗಿದೆ. ಕೆಲವು ಜಾತ್ರೆಗಳಲ್ಲಿ ಆಧುಕತೆಯ ಬರಾಟೆಯಲ್ಲಿ ನಾಟಕ ಕಂಪನಿಗಳ ಒಡನಾಟದಿಂದ ನಾಟಕ ನೋಡಲು ಟಿಕೇಟ್‌ಗಳನ್ನು ನಿಗದಿ ಪಡಿಸುತ್ತಾರೆ. ಇನ್ನು ಕೆಲವು ಕಡೆ ಉಚಿತವಾಗಿ ಪ್ರದರ್ಶನ ನೀಡುತ್ತಾರೆ.ಹಾಗಾಗಿ ಜಾತ್ರೆಗಳಲ್ಲಿ ವಿಶೇಷವಾಗಿ ಬಯಲಾಟಗಳನ್ನು ನೋಡುವುದಕ್ಕೆ ಬರುವ ಜನರು ಇದ್ದಾರೆ, ಆದರೆ ಇತ್ತೀಚಿನ ದಿನಗಳಲ್ಲಿ ಹಲವಾರು ನಾಟಕ ಕಂಪನಿಗಳ ಹೊಡೆತದಿಂದ ಜನಪದ ಕಲೆಗಳಲ್ಲಿ ಒಂದಾದ ಬಯಲಾಟವು ಕಳೆಗುಂದಿದಂತೆ ಕಾಣುತ್ತದೆ. ಆದರೂ ಸಾಂಸ್ಕೃತಿಕ ಕೊಡುಗೆಗೆ ಬಯಲಾಟವು ತನ್ನದೆಯಾದ ಪ್ರಾಮುಖ್ಯತೆಯನ್ನು ನೀಡುತ್ತವೆ.



ಬಯಲಾಟ ಪ್ರದರ್ಶನದ ದೃಶ್ಯ

**ಕುಸ್ತಿ ಪಂದ್ಯಾವಳಿ**

ಕುಸ್ತಿ ಪಂದ್ಯವು ಪ್ರಾಚೀನ ಕಾಲದಿಂದಲೂ ಕಂಡುಬರುವ ಗ್ರಾಮೀಣ ಕ್ರೀಡೆ, ಈ ಪಂದ್ಯಾವಳಿಗಳಲ್ಲಿ ಕುಸ್ತಿಪಟ್ಟುಗಳ ಶಕ್ತಿಯನ್ನು ಪ್ರದರ್ಶಿಸಲು ಒಂದು ಒಳ್ಳೆಯ ವೇದಿಕೆ ಜಾತ್ರೆಗಳಾಗಿದ್ದವು. ಇದೊಂದು ಗಂಡು ಕಲೆಯಾಗಿದೆ. ಬಲಾಡ್ಯರು ಆಡುವ ಆಟವಾಗಿದೆ. ತಮ್ಮ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುವ ಕಲೆಯಾಗಿದೆ. ಈ ಕುಸ್ತಿ ಪಂದ್ಯಾವಳಿಯು ರಾಮಾಯಣ, ಮಹಾಭಾರತದಲ್ಲಿಯು ಕುಸ್ತಿಯ ಮಾನ್ಯತೆಯನ್ನು ತಿಳಿಯಬುಹು. ರಾಮಾಯಣದಲ್ಲಿ ವಾಲಿ – ಸುಗ್ರೀವರೊಂದಿಗೆ ಸೆಣಸಾಟ, ಮಹಾಭಾರತದಲ್ಲಿ ಶ್ರೀಕೃಷ್ಣ – ಜಾಂಬವಂತ, ಭೀಮ – ದುರ್ಯೋದನ ನಡುವೆ ಕುಸ್ತಿ ಪಂದ್ಯಾವಳಿ ಜರುಗಿರುವುದು ಕಂಡುಬರುತ್ತದೆ. ವಿಜಯನಗರದ ಅರಸರು ಕುಸ್ತಿಗೆ ಬಹಳ ಪ್ರಾಮುಖ್ಯತೆಯನ್ನು ನೀಡುತ್ತಿದ್ದರು ಎಂಬುದು ಇತಿಹಾಸದಿಂದ ತಿಳಿಯಬಹುದು. ಸ್ವತಃ ಶ್ರೀಕೃಷ್ಣ ದೇವರಾಯನು ಕುಸ್ತಿ ಪಟ್ಟುವಾಗಿದ್ದರು ಎಂಬುದು ಚರಿತ್ರೆ ಸಾರಿದೆ.

ಈ ಪಂದ್ಯಾವಳಿಯು ಅನಾದಿಕಾಲದಿಂದಲೂ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬಂದ ಕಲೆಯಾಗಿದೆ. ಇಂತ ಪಂದ್ಯಾವಳಿಗಳು ಯಾದಗಿರಿ ಜಿಲ್ಲೆಯಾದ್ಯಂತ ನಡೆಯುವ ಪ್ರಮುಖ ಜಾತ್ರೆಗಳಲ್ಲಿ ನಡೆಯುವದು ವಿಶೇಷ. ಕುಸ್ತಿ ಪಂದ್ಯಾವ:ಳಿಯು ಅಭ್ಯಾಸ ಮಾಡುವುದಕ್ಕೆ ಸೂಕ್ತತವಾದ ಸ್ಥಳವೆಂದರೆ ಗರಡಿಮನೆ, ಈ ಗರಡಿಮನೆಯಲ್ಲಿ ಕುಸ್ತಿ ಪಟ್ಟುಗಳು ನಿತ್ಯವು ಅಭ್ಯಾಸ ಕೈಗೊಳ್ಳುತ್ತಾರೆ, ಇವರ ತರಬೆತಿಗೆ ಒಬ್ಬ ಗುರು ಇರುತ್ತಾನೆ. ಕುಸ್ತಿ ಪಟ್ಟುಗಳು ತಮ್ಮ ಕಲೆಯನ್ನು ಪ್ರದರ್ಶಿಸಲು ಜಾತ್ರೆಗಳು ಒಂದು ವೇದಿಕೆಯಾಗಿರುತ್ತವೆ. ಜಾತ್ರೆಗಳಲ್ಲಿ ಕುಸ್ತಿಯನ್ನು ಆಡುವ ಸ್ಥಳವನ್ನು ನಿಗದಿ ಪಡಿಸಿ ಮರುಳನ್ನು ಹಾಕಿಸುತ್ತಾರೆ, ಅದಕ್ಕೆ ಕುಸ್ತಿಯ ಅಖಾಡವೆಂದು ಕರೆಯುತ್ತಾರೆ. ಕುಸ್ತಿ ಪಂದ್ಯದಲ್ಲಿ ಗೆಲುವನ್ನು ಸಾದಿಸಿದ ವಿಜಯಶಾಲಿಗಳಿಗೆ ಬಹುಮಾನವನ್ನು ನೀಡುತ್ತಾರೆ. ಬಹುಮಾನವಾಗಿ ಬಂಗಾರದ ಖಡ್ಗ, ಬೆಳ್ಳಿಯ ಖಡ್ಗ, ತೆಂಗಿನಕಾಯಿ ಮತ್ತು ಹಣದ ರೂಪದ ಬಹುಯಮಾನವನ್ನು ನೀಡಿ ಗೌರವಿಸುತ್ತಾರೆ.

ಯಾದಗಿರಿ ತಾಲೂಕಿನ ಹತ್ತಿಕುಣಿ ಗ್ರಾಮದಲ್ಲಿ ಪ್ರತಿವರ್ಷ ಮುಸ್ಲಿಂ ಉರುಸ್ ನಡೆಯುತ್ತದೆ. ಆ ಉರುಸ್ ಬಂಧ್ಗಿಸಾಬ್ ದರ್ಗಾ ಎಂಬ ಹೆಸರಲ್ಲಿ ನಡೆಯುತ್ತದೆ. ದುಡಿಯುವದಕ್ಕೆ ದೇಶಾಂತರ ಹೊದ ಜನತೆ ಬಂಧ್ಗಿಸಾಬ್ ಉರುಸ್‌ಗೆ ಬಂದು ಸೇರುವರು. ಈ

ಉರುಸ್‌ನ ಪ್ರಮುಖ ಆಕರ್ಷಣೆಯೆಂದರೆ ಕುಸ್ತಿ, ಕುಸ್ತಿಯನ್ನು ಆಡುವದಕ್ಕೆ ದೂರದ ಊರಿಂದ ಕುಸ್ತಿ ಸ್ಪರ್ಧಾಳುಗಳು ಬರುವರು. ಹೀಗೆ ವಿವಿಧ ಗ್ರಾಮಗಳಿಂದ ಆಗಮಿಸಿರುವ ಕುಸ್ತಿಪಟ್ಟುಗಳು ಜಾತ್ರೆಯಲ್ಲಿ ಆಯೋಜಿಸಿರುವ ಪಂದ್ಯಾವಳಿಗಳಲ್ಲಿ ಪಾಲ್ಗೋಳ್ಳುತ್ತಾರೆ. ವಿಜಯಶಾಲಿಯಾದರೆ ಆತನನ್ನು ಇಡಿ ಅವರ ಊರಿನ ತುಂಬೆಲ್ಲಾ ಮೆರವಣಿಗೆಯನ್ನು ಮಾಡಿಸಿ ಗೌರವವನ್ನು

ನೀಡುತ್ತಾರೆ. ಇಂತಹ ಕುಸ್ತಿ ಪಂದ್ಯಾವಳಿಯು ಜಾತ್ರೆಗಳಲ್ಲಿ ನೋಡುಗರಿಗೆ ಸಂತೋಷವನ್ನು ನೀಡುತ್ತದೆ, ಆ ಜಾತ್ರೆಗೂ ಹೊಸ ಮೆರಗೂ ಬರುತ್ತದೆ. ಅಷ್ಟೇ ಅಲ್ಲದೆ ಆಧುನಿಕತೆ ಬೆಳೆದಂತೆಲ್ಲ ಕುಸ್ತಿ ಪಂದ್ಯಾವಳಿಗಳು ಜಾತ್ರೆಗಳಲ್ಲಿ ಮಾತ್ರ ಸೀಮಿತವಾಗದೆ ವಿಶ್ವಮಟ್ಟದಲ್ಲಿ ನಡೆಯುವ ಓಲಂಪಿಕ್ಸನಲ್ಲಿಯೂ ಒಂದು ಸ್ಪರ್ಧೆಯಾಗಿ ಪರಿಗಣಿಸಿರುವುದು ಮಹತ್ವದ ಸಂಗತಿಯಾಗಿದೆ.



ಕುಸ್ತಿಪಟ್ಟುಗಳು ಕುಸ್ತಿ ಆಡುತ್ತಿರುವ ದೃಶ್ಯ

**ಡೊಳ್ಳು ಕುಣಿತ**

ಜನಪದ ಕಲೆಗಳಲ್ಲಿ ಡೊಳ್ಳು ಕುಣಿತವು ಗಂಡು ಕಲೆಯಗಿದೆ, ಪುರುಷರಿಗೆ ಮಿಸಲಿರುವ ಕಲೆಯಾಗಿದೆ. ಉತ್ತಮ ಮೈಕಟ್ಟು ಹೊಂದಿರುವ, ಶಕ್ತಿಶಾಲಿಗಳು ಇದನ್ನು ಪ್ರದರ್ಶಿಸುವರು. ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಈ ಕಲೆಯನ್ನು ಕಾಣುತ್ತೇವೆ. ಅದಕ್ಕೆ ಯಾದಗಿರಿ ಜಿಲ್ಲೆಯು ಹೊರತಲ್ಲ. ಡೊಳ್ಳು ಕುಣಿತವು ಮೂಲತಃ ಕುರುಬ ಜನಾಂಗದ ವಾದ್ಯವಾಗಿರುವ ಡೊಳ್ಳು ಹಳ್ಳಿ ಜೀವನದ ಸಂಸ್ಕೃತಿಯನ್ನು ಬಿಂಬಿಸುತ್ತದೆ.

ಕುರುಬರಿಗೆ ವಂಶಸ್ಥರು ಪಾರಂಪರಿಕವಾಗಿ ಈ ನೃತ್ಯವನ್ನು ಆಡುತ್ತಾ ಬಂದಂತವರು. ಡೊಳ್ಳನ್ನು ತಯಾರಿಸಲು ಮರ ಮತ್ತು ಚರ್ಮದಿಂದ ಮಾಡುತ್ತಾರೆ. ಈ ವಾದ್ಯವು ಬೀರೇಶ್ವರ ದೇವರಿಗೆ ಅತಿ ಪ್ರಿಯವಾದ ವಾದ್ಯವಾಗಿದೆ ಎಂಬುದು ಪ್ರತೀತಿ. ದೇವರ ಗುಡಿಗಳಲ್ಲಿ, ರಥೋತ್ಸವದ ಸಂದರ್ಭದಲ್ಲಿ, ಇನ್ನಿತರ ಮಂಗಳಕಾರ್ಯಗಳಿಗೆ ಡೊಳ್ಳನ್ನು ಬಾರಿಸುವದು ಸಂಪ್ರದಾಯ. ಇಂತಹ ಸಂಪ್ರದಾಯಗಳು ಜಾತ್ರೆಗಳಲ್ಲಿ ನಡೆಯುವದು, ನೋಡುಗರ ಆಕರ್ಷಕ ಕಲೆ ಯಾವುದೆಂದರೆ ಅದು ಡೊಳ್ಳಿನ ಮೇಳ ಅಥವಾ ಡೊಳ್ಳು ಕುಣಿತ ಎಂತಲೂ ಕರಯುತ್ತಾರೆ.

ಮಂಗಳಕರವಾದ ಕಾರ್ಯಕ್ರಮಗಳಲ್ಲಿ ಡೊಳ್ಳಿನ ಮೇಳ ಅತ್ಯಅವಶ್ಯಕ, ವಿಶೇಷವಾಗಿ ದೇವರು-ದೇವತೆಗಳ ಉತವ್ಸ, ಪಲ್ಲಕ್ಕಿ ಮೆರೆವಣಿಗೆ, ದೇವರ ಮೂರ್ತಿಗಳನ್ನು ಊರೊಳಗೆ ಕರೆದುಕೊಂಡು ಹೊಗುತ್ತಿರುವಾಗ, ಗಂಗಾಸ್ಥಳಕ್ಕೆ ಹೊಗುವಾಗ ಹಾಗೂ ರಥೋತ್ಸವ ಜರಗುತ್ತಿರುವ ಸಮಯದಲ್ಲಿ ಡೊಳ್ಳಿನ ಮೇಳು ಲಯಬದ್ದವಾಗಿ ಬಾರಿಸುತ್ತಿದ್ದರೆ ಜಾತ್ರೆಗೆ ಕಳೆಕಟ್ಟುವುದು. ಇಂತಹ ಕುಣಿತ ಯಾದಗಿರಿ ತಾಲೂಕಿನ ಸುಕ್ಷೇತ್ರವಾದ ಮೈಲಾಪುರದ ಶ್ರೀ ಮೈಲಾರಲಿಂಗೇಶ್ವರನ ಜಾತ್ರೆಯಲ್ಲಿ ಡೊಳ್ಳು ಬಾರಿಸುವದು ಪದ್ದತಿ ಇದೆ. ಶ್ರೀ ಮೈಲಾರಲಿಂಗನ ಭಕ್ತರು ಅತಿ ಹೆಚ್ಚು ಕುರುಬರು ಆದ ಕಾರಣ ತಮ್ಮ ಗಂಡು ಕಲೆಯನ್ನು ದೇವರಿಗೆ ಸಮರ್ಪಿಸಿ ಸಂಭ್ರಮಿಸುವರು.

ಡೊಳ್ಳಿನ ಮೇಳವು ಗಂಡು ಕಲೆಯಾಗಿದೆ, ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರುಕೂಡ ಈ ಕಲೆಯನ್ನು ಕರಗತ ಮಡಿಕೊಂಡಿರುದು ವಿಶೇಷವಾಗಿದೆ. ಉದಾಹರಣೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿಯಾಗಲಿ, ಜಿಲ್ಲಾ ಉತ್ಸವಗಳಲ್ಲಿಯಾಗಲಿ ಅಥವಾ ಇನ್ನಿತರ ದೊಡ್ಡ, ಸಣ್ಣ ಪ್ರಮಾಣದ ಕಾರ್ಯಕ್ರಮಗಳಲ್ಲಿ ಡೊಳ್ಳಿನ ಮೇಳವು ಪ್ರಮುಖ ಪ್ರವೃತ್ತಿ ಕಲೆಯಾಗಿ ಆಕರ್ಷಿಸುತ್ತದೆ. ಜಾತ್ರೆಗಳಲ್ಲಿ ಡೊಳ್ಳನ್ನು ಬಾರಿಸುತ್ತಾ ನೆರೆದ ಜನ-ಮನವನ್ನಾಕರ್ಷಿಸಲು ಡೊಳ್ಳಿನ ಮೇಲೆ ನಿಂತು ಡೊಳ್ಳು ಬಾರಿಸುವುದು ವಿಶೇಷ ಸನ್ನಿವೇಶಾಗಿದೆ. ಯಾವುದೆ ಶುಭ ಸಮಾರಂಭಗಳಲ್ಲಿ ಡೊಳ್ಳು ಬಾರಿಸುವುದು ಶುಭ ಸೂಚನೆಯನ್ನು ಸೂಚಿಸುವ ನಂಬಿಕೆಯಾಗಿದೆ. ಆದ್ದರಿಂದ ಜಾತ್ರೆಗಳಲ್ಲಿ ಪ್ರದರ್ಶನಗೊಳ್ಳುವ ಹಲವು ಕಲೆಗಳಲ್ಲಿ ಡೊಳ್ಳಿನ ಮೇಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.



ಡೊಳ್ಳು ಕುಣಿತದ ಪ್ರದರ್ಶನದ ದೃಶ್ಯ

**ಮರಗಾಲು ಕುಣಿತ**

ಮರಗಾಲು ಕುಣಿತವು ಜನಪದ ಕಲೆಗಳಲ್ಲಿ ಕಂಡುಬರುವ ಹಲವು ಕಲೆಗಳಲ್ಲಿ ಒಂದಾಗಿದೆ. ಜನಪದ ಕಲೆಗಳಲ್ಲಿ ಮರಗಾಲು ಕುಣಿತ ಪ್ರಮುಖ ಕಲೆಯಾಗಿದೆ. ಇದಕ್ಕೆ ಮರಗಾಲು ನೃತ್ಯ ಎಂತಲೂ ಕರೆಯುತ್ತಾರೆ. ಈ ಕಲೆಯು ಯಾದಗಿರಿ ಜಿಲ್ಲೆಯ ಪ್ರಮುಖ ಜಾತ್ರೆಗಳಲ್ಲಿ, ಕನ್ನಡದ ಜಾತ್ರೆಗಳಲ್ಲಿ, ಜಿಲ್ಲಾ ಉತ್ಸವದಲ್ಲಿ ಪ್ರವೃತ್ತಿಯ ಕಲೆಯಾಗಿ ಕಂಡುಬರುತ್ತದೆ. ಕಾಲುಗಳಿಗೆ ಉದ್ದನೆಯ ಹಗುರವಾದ ಮರಗಳನ್ನು ಕಟ್ಟಿಕೊಂಡು ಮನರಂಜನೆ ನೀಡುವುದು. ಮರಗಾಲು ಕುಣಿತವು ಪೂರ್ವಸಿದ್ದತೆಯ ಅಭ್ಯಾಸ ಬಲ ಹೊಂದಿರುವವರಿಗೆ ಮಾತ್ರ ಕುಣಿಯುವದಕ್ಕೆ ಬರುತ್ತದೆ. ಪ್ರಾರಂಭದಲ್ಲಿ ಈ ಕಲೆಯು ದಕ್ಷಿಣ ಕರ್ನಾಟಕದ ಕೆಲವು ಪ್ರಮುಖ ಜಿಲ್ಲೆಗಳಲ್ಲಿ ಕಂಡುಬರುತ್ತಿತ್ತು, ಆದರೆ ಬರು-ಬರುತ್ತಾ ಉತ್ತರ ಕರ್ನಾಟಕದ ವರೆಗೂ ಮರಗಾಲು ಕುಣಿತದ ಕಲಾವಿದರು ತಮ್ಮ ಕಲೆಯನ್ನು ವಿಸ್ತರಿಸಿದರು. ಈ ಕಲೆಯನ್ನು ಇಂದು ದೇಶ ವ್ಯಾಪ್ತಿಯಲ್ಲಿ ಕಾಣಬಹುದಾಗಿದೆ. ವಿಸ್ತರಣೆಯಿಂದ ಕಲೆಗಾರರ ಆರ್ಥಿಕತೆಗೆ ಅನುಕೂಲವಾಯಿತು. ಜೊತೆಗೆ ಜಾತ್ರೆಗಳಲ್ಲಿ ಜನರನ್ನು ಆಕರ್ಷಿಸುವ ಬೆರಗು ಗೊಳಿಸುವ ಕಲೆಯಾಗಿದೆ.



ಮರಗಾಲು ಕುಣಿತ ಪ್ರದರ್ಶನದ ದೃಶ್ಯ

**ಗೊರವರ ಕುಣಿತ :**

ಗೊರವರು ನಮ್ಮ ಕರ್ನಾಟಕದ ತುಂಬೆಲ್ಲಾ ಕಂಡುಬರುವ ವೃತ್ತಿ ಮತ್ತು ಅರೆವೃತ್ತಿ ಗಾಯಕರು. ಜನಪದ ಪ್ರದರ್ಶನ ಕಲೆಗಳಲ್ಲಿ ಈ ಕಲೆಯು ಪ್ರಮುಖ ಕಲೆಯಾಗಿದೆ. ಮೂಲತ ಈ ಕಲೆಯನ್ನು ಪ್ರದರ್ಶಿಸುವವರು ಮಲ್ಲಯ್ಯ ಅಥವಾ ಮೈಲಾರಲಿಂಗ ದೇವರ ಆರಾಧಕರು. ಜಾತಿಜನಾಂಗ ಎನ್ನದೆ ಕುರುಬರು, ತಳವಾರರು, ಕಬ್ಬಲಿಗರು, ಹರಿಜನರು ಮುಂತಾದ ಜನಾಂಗದವರು ಅನುಸರಿಸಿಕೊಂಡು ಬಂದವರು. ದಕ್ಷಿಣ ಕರ್ನಾಟಕದಲ್ಲಿ ಈ ಕಲೆಯು ಅತಿ ಹೆಚ್ಚು ಕಂಡುಬಂದರು, ಇವರನ್ನು ಗೊರವರು, ದೇವರಗುಡ್ಡರು, ಗೊಗ್ಗಯ್ಯರು ಎಂದು ಕರೆಯುತ್ತಾರೆ. ಅದೇ ಉತ್ತರ ಕರ್ನಾಟಕ ಭಾಗದಲ್ಲಿ ಇವರನ್ನು ಗೊರವರು, ಗೊಗ್ಗಯ್ಯರು, ಮೈಲಾರಲಿಂಗನ ಗೊರವರು ಎಂದು ಕರೆಯುತ್ತಾರೆ.

ಗೊರವರ ಕುಣಿತದ ಹಿನ್ನೆಲೆಯನ್ನು ನೋಡುವದಾದರೆ ಮಧುರ ಕವಿಯ ಜನಪದ ಸಾಲನ್ನು ಗಮನಿಸಬಹುದು. "ಪಂಡಿತರಂ ವಿವಿಧ ಕಳಾ ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ಕಂಡರೆ ಕೇಳ್ವೊಡೆ ಗೊರವರ ದಂಡುಚಿಯೇ ಬೀದಿವರೆಯ ಬೀತನ ಕಥೆಯೇ" ಎಂದು ಉಲ್ಲೇಖಿತವಾಗಿದೆ. ಇದು ಜನಪದ ಸಾಹಿತ್ಯ ಮತ್ತು ಗೊರವನ ಕಲೆಯ ಮಾಹಿತಿಯನ್ನು ಒದಗಿಸುತ್ತದೆ. ಈ ಲೇಖನದಿಂದ ಮೈಲಾರಲಿಂಗನ ಕ್ಷೇತ್ರವು ಪ್ರಾಚೀನ ಕಾಲದಿಂದಲೂ ಸುಪ್ರಸಿದ್ಧಿಯನ್ನು ಪಡೆದಿದ್ದವು ಎಂದು ತಿಳಿಯುತ್ತದೆ. ಭಂಡಾರದ ಒಡೆಯ ಮಲ್ಲಯ್ಯನ ಚರಿತ್ರೆಯನ್ನು ಮನೆ-ಮನೆಗೆ ತೆರಳಿ ಭೀಕ್ಷೆಯನ್ನು ಬೇಡುವುದರ ಮೂಲಕ ಚರಿತ್ರೆ ಹರಡುತ್ತಾರೆ.

ಇವರ ವೇಷಭೂಷಣ ವಿಚಿತ್ರ ಮತ್ತು ವೈಶಿಷ್ಟೆ ಪೂರ್ಣವಾದವುಗಳು, ಚಿಕ್ಕ ಮಕ್ಕಳಿಗೆ ಶಾಂತವಾಗಿರುವಂತೆ ಗೊರವರ ವೇಷಭೂಷಣಗಳನ್ನು ಭೂತ-ಪ್ರೇತವೆನ್ನುವಂತೆ ಮಕ್ಕಳಗೆ ತೊರಿಸುವುದರೊಂದಿಗೆ ಹೆದರಿಸುತ್ತಾರೆ.

ಕರ್ನಾಟಕದಾದ್ಯಂತ ಗೊರವರು ಕಂಡು ಬರುವಂತೆ, ಯಾದಗಿರಿ ತಾಲೂಕಿನ ಸುಕ್ಷೇತ್ರವಾದ ಶ್ರೀ ಮೈಲಾರಲಿಂಗೇಶ್ವರ ದೇವಾಲಯ ಮೈಲಾಪೂರದಲ್ಲಿಯೂ ಗೊರವರ ಕುಣಿತ ಕಂಡುಬರುತ್ತದೆ. ಅದೇ ವೇಷಭೂಷಣದೊಂದಿಗೆ ಶ್ರೀ ಮೈಲಾರಲಿಂಗನನ್ನು ಹಾಡು ಹಾಡಿ ಕುಣಿಯುತ್ತಾರೆ, ಏಳು ಕೋಟಿಗೆ ಏಳುಕೋಟಿಗೆ ಎಂದು ಧ್ವನಿಯನ್ನು ಮಾಡಿ ಮೈಲಾರನನ್ನು ಮನತುಂಬಿಕೊಳ್ಳುತ್ತಾರೆ. ಜನರಿಗೆ ಮೈಲಾರಲಿಂಗನ ಭಕ್ತರೆಂದರೆ ಎಲ್ಲಿಲ್ಲದ ಗೌರವ ನೀಡುತ್ತಾರೆ.

ಏಳು ಕೋಟಿಗೆ ಏಳು ಕೋಟಿಗೆ
ಮೈಲಾರಲಿಂಗನ ಏಳು ಕೋಟಿಗೆ
ಏಳು ಕೋಟಿಗೆ ಒಡೆಯನಾದ
ಯಾದಗಿರಿಯ ಸವಿಗುಡ್ಡವ ಸೇರಿ
ಮುನ್ನ ಕಾರ್ಯ ಪಾಲಿಸಯ್ಯ
ಗುಡ್ಡದ ಲಿಂಗಯ್ಯ ನಿನಗೆ
ಏಳು ಕೋಟಿಗೆ ಏಳು ಕೋಟಿಗೆ ॥1॥

ಮನವ ಮೀಸಲು ಮಾಡಿಯ
ಸಂಗಾಚ ಗೂಡ ಹೊಡೆಯುತ ದಉತ
ಮಲ್ಲಿಕಾರ್ಜುನನ ಧ್ಯಾಸ ಮಾಡುತ
ಮಡದಿ ಮಕ್ಕಳು ಕೂಡಿಕೊಂಡು
ತಾಯಿಯ ದೂತ ಹೊತ್ತ
ದೂತ್ಯ ಹಿಡಿದು ಬಂದೇವು ನಿನಗೆ
ಏಳು ಕೋಟಿಗೆ ಏಳು ಕೋಟಿಗೆ ॥2॥

ಮಡದಿ ಮಾಳಮ್ಮಗ ಪತಿಯಾಗಿ
ಸರಿಪಾದ ಸೇರಿ ಪಂಚಮಾನ ದೇಶದೋಳ್
ನೆರದಿ ಪಣಿಯಲ್ಲಿ ವಿಭೂತಿ, ಗಂಧವ
ಧರಿಸಿದಿ ಕೊರಳಲ್ಲಿ ಜನಿವಾರ ನೀ ಹಾಕಿ
ಚಲ್ವ ಬಾಲೆಗೆ ಮರುಳ ಮಾಡಿದಿ
ತರುಣ ಗುಣ ಮಲ್ಲಯ್ಯ ನಿನಗೆ
ಏಳು ಕೋಟಿಗೆ ಏಳು ಕೋಟಿಗೆ. ॥3॥

ಸಿಟ್ಟಿನಿಂದಲಿ ಜಾವೂದಿ ಒಡೆದು
ಖಡ್ಗದಿಂದಲಿ ನಡೆದು ಶೌರ್ಯದಿಂದಲಿ
ವರವು ತಾ ಪಡೆದು ತಿರುಗಿ ಸಲುಹಿದಿ
ಮಾಯಾದಿಂದಲಿ ನಡೆದಿ ನನಗುರು
ಜೀನಗುರು ಮೈಲಾರಲಿಂಗಯ್ಯ ನಿನಗೆ
ಏಳು ಕೋಟಿಗೆ ಏಳು ಕೋಟಿಗೆ ॥4॥

ಈ ರೀತಿಯಾಗಿ ಗೊರವರು ಹಾಡುತ್ತಾರೆ. ಈ ಹಾಡಿನಲ್ಲಿ ಗೊರವರು ವೇಷಭೂಷಣ, ಅವರ ಮೂಲ ನೆಲೆ, ಮದುವೆಯ ಸಂದರ್ಭದ ವಿವರಗಳು ದೊರೆಯುತ್ತವೆ.

ಇಂತಹ ಹಾಡುಗಳನ್ನು ಹಾಡುತ್ತಾ ಶ್ರೀ ಮೈಲಾರಲಿಂಗನ ಮಹಿಮೆಯನ್ನು ಹಾಡುವಾಗ ಅವರ ವೇಷಭೂಷಣ ಬಹು ಮುಖ್ಯವಾಗುತ್ತವೆ. ಅವೆನೆಂದರೆ, ಉಪಾಸನೆಯೇ ಗೊರವರ ಮುಖ್ಯ ಗುರಿಯಾಗಿದೆ. ಹಣೆಗೆ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಬಗಲಿಗೆ ಕವಡೆಯ ಚೀಲವನ್ನು ಜೋತು ಬಿಟ್ಟಿರುತ್ತಾರೆ, ಕಂಬಳಿಯನ್ನು ಹೊದ್ದು, ಕೈಯಲ್ಲಿ ತ್ರಿಶೂಲ ಹಿಡಿದುಕೊಂಡು ಮೂರು-ನಾಲ್ಕು ಜನ ಸೇರಿಕೊಂಡು ಕಲೆಯನ್ನು ಪ್ರದರ್ಶನ ಮಾಡುತ್ತಾ, ಬಿಕ್ಷೆಯನ್ನು ಬೇಡುತ್ತಾ, ಮೈಲಾರಲಿಂಗನ ಮಹಿಮಾವನ್ನು ಹೇಳುತ್ತಾರೆ.

ಗೊರವರ ಕುಣಿತವು ವಿಶೇಷವಾಗಿ ಮೈಲಾರಲಿಂಗನ ಜಾತ್ರೆಯಲ್ಲಿ ಕಂಡುಬರುತ್ತದೆ. ಈ ಜಾತ್ರೆಯು ವರ್ಷಕ್ಕೆ ಎರಡು ಬಾರಿ ನಡೆಯುತ್ತದೆ. ಸಂಕ್ರಾಂತಿಯಂದು ಮತ್ತು ದೀಪಾವಳಿಯಂದು ನಡೆಯುತ್ತದೆ. ಹಲವು ವೇಷಭೂಷಣದೊಂದಿಗೆ ಹಣೆಗೆ ವಿಭೂತಿ ಮತ್ತು ಭಂಡಾರವನ್ನು ಹಚ್ಚಿಕೊಂಡು, ಕಂಬಳಿಯನ್ನು ಹೊದ್ದುಕೊಂಡಿರುತ್ತಾರೆ. ಅದರಲ್ಲಿಯೂ ಮೈಲಾರಲಿಂಗನ ಪ್ರತಿ ಭಕ್ತರು ತಮ್ಮ ಮನೆಯಲ್ಲಿ ಮೈಲಾರದೇವರ ಮೂರ್ತಿಯನ್ನು ಇಟ್ಟುಕೊಂಡು ಪ್ರತಿ ನಿತ್ಯ ಪೂಜಿಸುತ್ತಾರೆ. ವಿಶೇಷವಾಗಿ ದಸರಾ ಹಬ್ಬದಂದು ಮನೆ ಮಲ್ಲಯ್ಯನ್ನು ಗೊರವರನ್ನು ಕರೆಸಿ, ಪೂಜಿಸಿ, ನಾನಾ ವಿಧವಾದ ನೈವೇದ್ಯವನ್ನು ಅರ್ಪಿಸಿ ಏಳು ಕೋಟಿಗೆ ಏಳು ಕೋಟಿಗೆ, ಮಲ್ಲಯ್ಯನ ಏಳು ಕೋಟಿಗೆ, ಗಂಗೆ ಮಾಳಮ್ಮನ ಏಳು ಕೋಟಿಗೆ, ತುರಂಗಾ ಬಾಲಮ್ಮನ ಏಳು ಕೋಟಿಗೆ ಎಂದು ಧ್ವನಿಯನ್ನು ಹೊರಡಿಸುತ್ತಾ ಮನೆಯ ಒಳಗಡೆ ಇರುವ ಮಲ್ಲಯ್ಯನ ಮೂರ್ತಿಯನ್ನು ಮನೆ ಹೊರಗಡೆ ಹೊತ್ತುಕೊಂಡು ತಂದು ಪೂಜಿಸಿ, ಆರತಿಯನ್ನು ಬೆಳಗಿ, ತೆಂಗಿನ ಕಾಯಿಯನ್ನು ಒಡೆದು ಮತ್ತೇ ಮನೆಯೊಳಗೆ ತಂದು ಇಡುವರು, ಭಂಡಾರವನ್ನು ಹಚ್ಚುವರು. ಮನೆಯ ಭಕ್ತರೆಲ್ಲಿಗೆ ಭಂಡಾರವನ್ನು ಹಚ್ಚುವರು, ನಂತರ ನಾಯಿಯಂತೆ ಬೊಗಳಿ ದಕ್ಷಿಣೆಯನ್ನು ಪಡೆದು ತೆರಳುವರು. ಇಂತಹ ಪದ್ದತಿಯು ಮೈಲಾರನ ಭಕ್ತರಲ್ಲಿ ಕಂಡುಬರುತ್ತದೆ. ಹಾಗೆ ಜಾತ್ರೆಯಲ್ಲಿ ಗೊರವರ ಕುಣಿತ ಇಲ್ಲದೆ ಹೊದರೆ ಅದು ಮಲ್ಲಯ್ಯನ ಜಾತ್ರೆಯಂತನಿಸದು.

**ವೇಷಗಾರರು:**

ಇವರನ್ನು ಹಗಲು ವೇಷಗಾರರು ಎಂತಲೂ ಕರೆಯುತ್ತಾರೆ. ವೇಷವನ್ನು ಹಾಕಿಕೊಳ್ಳುವರು ಪುರುಷರು. ಇವರಿಗೆ ಗೊತ್ತಿರುವ ಯಾವುದಾದರೂ ಪೌರಾಣಿಕ ಕತೆಯ ತುಣಕನ್ನು ವೇಷಗಳನ್ನು ಹಾಕಿಕೊಂಡು ಜಾತ್ರೆಗಳಲ್ಲಿ ಪ್ರದರ್ಶಿಸುತ್ತಿದ್ದರು. ಇವರನ್ನು

ನಡೆದಾಡುವ ಮಹಾಕಾವ್ಯಗಳೆಂತಲೂ ಕರೆಯುತ್ತಿದ್ದರು. ಏಕೆಂದರೆ, ರಾಮಾಯಣದ ರಾಮ,ಸೀತೆ, ಲಕ್ಷ್ಮಣ, ಹಣಮಂತ, ಜಾಂಬವಂತನ ವೇಷಗಳನ್ನು ಹಾಗೂ ಮಹಾಭಾರತದ ಪಂಚ ಪಾಂಡವರ ಪಾತ್ರಗಳ ವೇಷವನ್ನು ಹಾಕಿಕೊಂಡು ಜಾತ್ರೆಗಳಲ್ಲಿ ಮನರಂಜನೆಯನ್ನು ನೀಡುತ್ತಾ ಹಲವು ಕತೆಗಳ ಅಣುಕು–ತುಣುಕು ಕತೆಯನ್ನು ಪ್ರದರ್ಶಿನ ಮಾಡುತತ್ತಿದ್ದರು. ಇದರಿಂದ ಅವರಿಗೆ ಆರ್ಥಿಕವಾಗಿ ಅಲ್ಪ–ಸ್ವಲ್ಪ ಧನ ಸಹಾಯವಾಗುತ್ತಿತ್ತು.

**ಆಧುನಿಕ ಕಲೆಗಳು**

ಅನಾದಿಕಾಲದಿಂದಲೂ ಜಾತ್ರೆಗಳು ನಡೆದುಕೊಂಡು ಪರಂಪರೆಯ ರಾಯಭಾರತ್ವವನ್ನು ವಹಿಸಿಕೊಂಡಂತಿದೆ. ಜಾತ್ರೆಗಳು ಯುಗದಿಂದ ಯುಗಕ್ಕೆ ಮನುಷ್ಯತ್ವದ ಮಮತೆ, ಸಮಾನತೆಯನ್ನು, ಭಕ್ತಿ–ಭಾವ್ಯಕ್ಯತೆ, ಆಧ್ಯಾತ್ಮದ ಒಲವು ಮುಂತಾದ ಸನ್ಮಾರ್ಗಯುತವಾದ ನಂಬಿಕೆಗಳು ಜನಮಾನಸದಲ್ಲಿ ಬಿತ್ತಿವೆ. ಆದರೆ ಅಣುಯುಗದಲ್ಲಿರುವ ನಾವುಗಳು ಆಧುನಿಕ ಜೀವನ ಶೈಲಿಗೆ ಸಿಕ್ಕಿಕೊಂಡು ಜನಪದ ಕಲೆಗಳು ಕಳೆಗುಂದುತ್ತಾ ಇವೆ. ಆಧುನಿಕ ಕಲೆಗಳ ಬರಾಟೆಯಲ್ಲಿ ಜನಪದ ಪ್ರದರ್ಶನ ಕಲೆಗಳು ಕಮರಿಹೊಗುತ್ತಿವೆ.

ಇಂತಹ ಸಂದರ್ಭದಲ್ಲಿ ಜಾತ್ರೆಗಳಲ್ಲಿ ನಡೆಯುವ ಸಂಪ್ರದಾಯ ಆಚರಣೆಗಳ ಜೊತೆಗೆ ಹೊಸದಾಗಿ ಕಂಡುಬರು ಆಧುನಿಕ ಮನೊರಂಜನೆ ಕಲೆಗಳೆಂದರೆ, ಮೋಟಾರ್ ಸೈಕಲ್ ರೇಸ್, ಮಕ್ಕಳ ಚಿಕ್ಕ ರೈಲು, ಮಕ್ಕಳ ಗಾಳಿ ತುಂಬಿದ ಜಾರೊ ಬಲೂನುಗಳು, ಈಜುಕೋಳ, ಸುಮಾರ 30 ರಿಂದ 40 ಅಡಿ ಎತ್ತರದ ತೋಟ್ಟಿಲು ಚಕ್ರ, ಸಂಗೀತದ ಲಯಕ್ಕೆ ತಕ್ಕಂತೆ ಕುಣಿಯುವ ಚಕ್ರಗಳು, ಶೂಟರ್ ಗನ್, ಅಕ್ಕಿಯ ಮೇಲೆ ಹೆಸರು ಬರೆಯುವದು, ಅಚ್ಚೆ ಹಾಕಿಸುವದು, ವಿದ್ಯತ್‌ನ ಸಹಾಯದಿಂದ ವಿವಿಧ ರೀತಿಯಲ್ಲಿ ಮಿಂಚುವ ಭಾವಚಿತ್ರಗಳು ಇನ್ನು ಮುಂತಾದವುಗಳು ಆಧುನಿಕ ಜೀವನದ ಜನತೆಯ ಮನವನ್ನಾಕರ್ಷಿ ಸುವ ಕಲೆಗಳು ಕಂಡುಬರುತ್ತವೆ.

**ಸಮಾರೂಪ**

ಹೀಗೆ ಜಾತ್ರೆಗಳಲ್ಲಿ ಕಂಡುಬರುವ ವಿವಿಧ ಕಲೆಗಳನ್ನು ಪ್ರದರ್ಶಿಸುತ್ತಾ ಜನಪದರ ಪ್ರತಿಭೆಯನ್ನು ಕಂಡುಕೊಳ್ಳುತ್ತಾ ಮನಸಾರೆ ಕಲೆಯನ್ನು ಕಣ್ಣುತುಂಬಿಕೊಳ್ಳುತ್ತಾ ಜಾತ್ರೆಯ ಸಾರ್ಥಕತೆಯನ್ನು ಮೆರೆಯಬಹುದಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಜನಪದರ ಕಲೆಗಳು ಪ್ರದರ್ಶನಗೊಳ್ಳದಿರುವುದು ವಿಷಾದದ ಸಂಗತಿ. ಆದುನಿಕ ಜೀವನ ಕ್ರಮವು ರೂಢಿಸಿಕೊಂಡ ಮನುಷ್ಯ ಜನಪದ ಕಲೆಗಳ ಪ್ರಾಮುಖ್ಯತೆಯನ್ನು ಮರೆತಂತಿದೆ.

ಆದರೂ ಜನಪದ ಕಲೆಗಳಲ್ಲಿ ಹಲವಾರು ಜೀವನದ ಏಳು–ಬೀಳಿನ ಸಂಗತಿಯಿದೆ, ಕಲಾವಿದರ ಕಲೆಯ ಮಹತ್ವದ ಸಂಗತಿ ಅಡಗಿದೆ. ಪರಂಪರೆ ಪ್ರತೀಕವು ಒಳಗೊಂಡಿದೆ. ಜನಪದ ಕಲೆಗಳನ್ನು ಕಾಪಾಡಿಕೊಂಡು ಬಂದಿರುವ ಕುಟುಂಬಗಳನ್ನು ರಕ್ಷೀಸಬೇಕಾಗಿದೆ. ಇವೆಲ್ಲವುಗಳು ಇಂದಿನ ಯುಗದಲ್ಲಿಯು ಹಾಗೂ ಮುಂದಿನ ಪೀಳಿಗರವರೆಗೂ ನಿರಂತರವಾಗಿ ನಮ್ಮ ಕಲೆಗಳನ್ನು ರಕ್ಷೀಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಿದೆ

**ಆಧಾರ ಗ್ರಂಥಗಳು**


1. ಹೈದ್ರಾಬಾದ ಕರ್ನಾಟಕದ ಜಾತ್ರೆಗಳು. – ಡಾ. ಜಗನ್ನಾಥ ಹೆಬ್ಬಾಳೆ
2. ಹೈದ್ರಾಬಾದ ಕರ್ನಾಟಕ ಜನಪದ ಪ್ರದರ್ಶನ ಮತ್ತು ಕಲೆ – ಡಾ. ಎಚ್.ಟಿ.ಪೊತೆ
3. ಕಲಬುರಗಿ ಜಿಲ್ಲೆಯ ಜಾತ್ರೆಗಳು. – ಡಾ. ಚಿ.ಸಿ. ಲಿಂಗಣ್ಣ
4. ಯಾದಗಿರಿ ಜಿಲ್ಲೆಯ ಸಾಂಸ್ಕೃತಿಕ ಅದ್ಯಯನ. – ಡಾ. ಭೀಮರಾಯ ಲಿಂಗೇರಿ
5. ಶಹಾಪೂರ ದರ್ಶನ. – ಪ್ರೊ. ಸೂಗಯ್ಯ ಹಿರೇಮಠ
6. ಇತಿಹಾಸ ಪುಟಗಳಲ್ಲಿ ಯಾದಗಿರಿ. – ಪಾಟೀಲ ಬಸಣ್ಣಗೌಡ
7. ಹೈದ್ರಾಬಾದ ಕರ್ನಾಟಕದ ಗ್ರಾಮ ದೇವತೆಗಳ ಅದ್ಯಯನ – ಡಾ. ಚನ್ನಣ್ಣ ವಾಲೀಕಾರ
8. ಕರ್ನಾಟಕದ ಗ್ರಾಮ ದೇವತೆಗಳು – ಲಿಂಗಯ್ಯ. ಡಿ
9. ಹಬ್ಬಗಳು ಜಾತ್ರೆಗಳು – ರಮೇಶ ಬೀಗೊ
10. ಯಾದಗಿರಿ ಜಿಲ್ಲೆಯ ಗ್ರಾಮ ಕೋಶ – ಡಾ. ಚಂದ್ರಕಲಾ ಬಿದರಿ
11. ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ತ್ರಿಕೂಟಾಚಲ
12. ದೇವಾಲಯಗಳ ಅಧ್ಯಯನ (ಸಂಶೋಧನಾ ಗ್ರಂಥ)– ಶ್ರೀನಾಥ ಅಮೃತ ಮುತ್ತಗೌಡ